ವಿಧಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಅದಕ್ಕಾಗಿ ಫಾರೆಸ್ಟ್ ಆಕ್ಟ್ ತಿದ್ದುಪಡಿ ಮಾಡಲು ಕಾನೂನು ಇಲಾಖೆಯೊಂದಿಗೆ ಚರ್ಚೆ ಮಾಡಲಾಗಿದೆ. ತಮಿಳುನಾಡಿನಲ್ಲಿ ಪ್ರಾಹಿಬಿಷನ್ ವಿಚಾರದಲ್ಲಿ ಕಾನೂನು ತಂದು ಉಗ್ರ ಶಿಕ್ಷೆಯನ್ನು ವಿಧಿಸಿರುವ ಹಾಗೆ ಇಲ್ಲಿಗೂ ತರಬೇಕೆಂದು ಸರ್ಕಾರದ ಉದ್ದೇಶವಿದೆ ಇದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ನಾವೂ-ನೀವೂ ಒಟ್ಟಿಗೆ ಸೇರಿ ಇದನ್ನು ನಿಲ್ಲಿಸಬೇಕಾಗಿದೆ. ಕೇರಳದಲ್ಲಿ ಗಂಧದ ಮರದ ಕಾರ್ಖಾನೆ ಇರುವುದು ನಿಜ. ಮತ್ತು ಅಲ್ಲಿ ಗಂಧದ ವೃಕ್ಷಗಳಿಲ್ಲದಿರುವುದೂ ನಿಜ. ಮೈಸೂರು ಮತ್ತು ಕೊಡಗಿನಲ್ಲಿ ಹರಾಜು ಹಾಕುವ ಮರವನ್ನು ಅವರು ಕೊಂಡುಕೊಳ್ಳುತ್ತಿರಬಹುದು. ಗಂಧದ ಮರದ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಉಗ್ರ ರೂಪದ ಕಾನೂನು ತರುವುದಕ್ಕೂ ಸರ್ಕಾರ ತಯಾರಿದೆ. ಇದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಈ ಕುರಿತು ಮಾನ್ಯ ಸದಸ್ಯರ ಸಲಹೆಗಳು ಬಂದರೆ ಸ್ವಾಗತ ಮಾಡುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೆಗಳು ಮುಗಿದವು.

Representation from Members

Flood havoc in North Kanara District

ಶ್ರೀ ವಿ. ಬಿ ಭಾವಿ.—ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಮಹತ್ವವುಳ್ಳ ವಿಷಯವೊಂದನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಅಧ್ಯಕ್ಷರು.—ಅದರ ಬಗ್ಗೆ ದಯವಿಟ್ಟು ಸೂಚನೆ ಕಳುಹಿಸಿಕೊಡಿ.

ಶ್ರೀ ವಿ. ಬಿ. ಭಾವಿ.—ಸ್ವಾಮಿ, ನಮ್ಮ ಭಾಗದಲ್ಲಿ ಬೇಕಾದಷ್ಟು ಮನೆಗಳು ಮುಳುಗಿ ಹೋಗಿವೆ. ಪ್ರವಾಹದ ಹಾವಳಿ ವಿಪರೀತವಾಗಿದೆ. ದಯವಿಟ್ಟು ಇದನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರಲು ಅವಕಾಶ ಕೊಡಬೇಕು. ಇದು ನಮ್ಮ ಭಾಗದ ಜನರ ಜೀವನ್ಮರಣದ ಪ್ರಶ್ನೆಯಾಗಿದೆ.

ಅಧ್ಯಕ್ಷರು.—ರಾಜ್ಯದಲ್ಲಿ ಪ್ರವಾಹ ಪರಿಸ್ಥಿತಿಯಿಂದುಂಟಾಗಿರುವ ಸಮಸ್ಯೆಗಳ ಬಗ್ಗೆ ಪೂರ್ಣ ವರದಿಗಳು ಬಂದ ಮೇಲೆ ಮಾನ್ಯ ಕಂದಾಯಸಚಿವರು ವಿವರವಾದ ಹೇಳಿಕೆಯನ್ನು ಈ ಸದನದಲ್ಲಿ ನೀಡಲಿದ್ದಾರೆ. ಆದುದರಿಂದ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಭಾವಿಯವರು ಅವರ ಭಾಗದಲ್ಲುಂಟಾಗಿರುವ ಸಮಸ್ಯೆಗಳ ಬಗ್ಗೆ ನನಗೆ ಬರೆದು ಕಳುಹಿಸಿದ್ದಾರೆ. ಬೇರೆ ಸದಸ್ಯರುಗಳು ಕೂಡ ಬರೆದಿದ್ದಾರೆ. ಸಂಪೂರ್ಣ ವರದಿ ಬಂದ ಮೇಲೆ ವಿವರವಾದ ಹೇಳಿಕೆಯನ್ನು ಕೊಡುವೆನೆಂದು ನಾನೀಗಾಗಲೆ ತಿಳಿಸಿದ್ದೇನೆ. ಭಾರಿ ಮಳೆಯಿಂದಾಗಲೀ ಅಥವಾ ಸಮುದ್ರದ ಕೊರೆತದಿಂದಾಗಲೀ ನಷ್ಟ ಎಷ್ಟಾಗಿದೆ ಮತ್ತು ಯಾವ ರೂಪದಲ್ಲಾಗಿದೆ ಹಾಗೂ ದುರಸ್ತು ಕಾಮಗಾರಿಗಳನ್ನು ಯಾವ ರೀತಿ ಕೈಗೊಳ್ಳಬೇಕೆಂಬ ಬಗ್ಗೆ ವಿವರವಾದ ಹೇಳಿಕೆಯನ್ನು ಕೊಡಬೇಕೆನ್ನುವ ದೃಷ್ಟಿಯಿಂದಲೇ ಸಂಪೂರ್ಣ ವರದಿ ಬರಲಿ ಎಂದು ಹೇಳಿದ್ದು. ಅನೇಕ ಮಾನ್ಯ ಸಚಿವರುಗಳು ಅವರವರ ಜಿಲ್ಲೆಗಳಿಗೆ ಹೋಗಿ ಬಂದಿದ್ದಾರೆ. ಶ್ರೀ ಬೇಗಾನೆ ರಾಮಯ್ಯನವರು, ಶ್ರೀ ವೀರಪ್ಪ ಮೊಯಿಲಿಯವರು, ಶ್ರೀ ಶಂಕರ ರಾವ್ ಅವರು ಮತ್ತು ಶ್ರೀ ಜಕನೂರ್ ಅವರೆಲ್ಲ ಅವರವರ ಜಿಲ್ಲೆಗಳಿಗೆ ಹೋಗಿ ಬಂದಿದ್ದಾರೆ. ಕೆಲವು ಶಾಸಕರೂ ಕೂಡ ಅವರವರ ಜಾಗಗಳಿಗೆ ಹೋಗಿ ಬಂದಿದ್ದಾರೆ.

೧೦-೩೦ ಎ.ಎಂ.

ಮಾನ್ಯ ಅಧ್ಯಕ್ಷರೇ, ಕೆಲವು ವಾಹನಗಳನ್ನು ಕೊಟ್ಟಿದ್ದೆವು ; ಅನೇಕ ಜನ ಮಾನ್ಯ ಸದಸ್ಯರುಗಳು ಹೋಗಿ ಬಂದಿದ್ದಾರೆ. ಮಾನ್ಯ ಸದಸ್ಯರಾದ ಭಾವಿಯವರು ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಕೂಡ ತೆಗೆದುಕೊಳ್ಳುತ್ತೇವೆ. ತಮ್ಮ ಕ್ಷೇತ್ರದಲ್ಲಿ ಹಾಗೂ ತಮ್ಮ ತಾಲ್ಲೂಕಿನಲ್ಲಿ ನಷ್ಟವಾಗಿರುವ ಬಗ್ಗೆ ವಿವರವಾದ ಪತ್ರವನ್ನು ಬರೆದು ಕಳುಹಿಸಿದರೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸೋಮವಾರ ಅಥವಾ ಮಂಗಳವಾರದೊಳಗೆ ಎಲ್ಲ ಕಡೆಯಿಂದಲೂ ನಮಗೆ ವಿವರವಾದ ವರದಿ

ಗಳು ಬರುವ ನಿರೀಕ್ಷೆಯಿದೆ : ಸರ್ಕಾರ ಮತ್ತೆ ಹೇಳಿಕೆ ಕೊಡುವುದರಲ್ಲಿದೆ. ಸರ್ಕಾರ ಹೇಳಿಕೆ ಕೊಟ್ಟ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು. ಈಗ ಒಬ್ಬೊಬ್ಬರಿಗೆ ಪ್ರಶ್ನೆ ಕೇಳಲು ಅವಕಾಶ ಕೊಟ್ಟರೆ, ಬೇರೆ ಬೇರೆ ಸದಸ್ಯರೂ ಪ್ರಸ್ತಾಪ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಆದುದರಿಂದ ಈಗ ಈ ವಿಷಯವನ್ನು ಇಲ್ಲಿಗೆ ಬಿಡುವುದು ಸೂಕ್ತವೆಂದು ಹೇಳುತ್ತೇನೆ.

ಶ್ರೀ ಪಂಪಾಪತಿ.—ಸ್ವಾಮಿ, ರೂಲ್ ೩೧೨ ಪ್ರಕಾರ ನಾನೊಂದು ನೋಟೀಸ್ ಕಳುಹಿಸಿದ್ದೆ.....

ಅಧ್ಯಕ್ಷರು.—ಇವತ್ತು ಬಂದು ನನ್ನನ್ನು ನೋಡಿ.

Statement by the Minister

re : Strike of class IV Servants in the State

SRI M VEERAPPA MOILY (Finance Minister).—I wish to make the following statement.—

Mr. Speaker Sir, while making a statement in the House on 3-7-1980 on the demands of Class IV employees, I had assured the Hon. Members that I would further discuss the matter with the representatives of Class IV employees and make a statement before the end of the succeeding week. I held discussions with the representitives of the Association on 8-7-1980.

The Hon. Members would recall my earlier statement that Government were sympathetic towards Class IV employees and that their reasonable demands would be considered favourably. I am now glad to inform the House that Government have accepted their main demands. These includes :

(i) Fixation of pay at the next stage *i. e.*, an additional increment in the higher scale allowed to these employees after 15 years of service.

(ii) Grant of washing allowance of Rs. 6 p.m. to the Class IV employees who according to the rules are required to wear uniforms. This benifit would also be admissible to Drivers.

(iii) Grant of Medical allowance of Rs. 5 p. m. in lieu of the existing system of reimbursement of charges of Rs. 5 p. m. on production of cash receipt from the Chemists' shop. They would also be allowed the existing facility of reimbursement of expenditure in excess of Rs. 5 p. m. on production of vouchers.

Government have taken a decision to provide free education in Government Colleges to the children of Class IV employees upto General Degree level.

During the discussion, I informed the representatives that Government had already issued instructions on some of their other